

ವೈ.ಎಸ್.ವಿ. ದತ್ತ

# ಕುವೆಂಪು ಮತ್ತು ಮಾಸ್ತಿ

## ಮಾದರಿ ಸಂವಾದ ಮತ್ತು ಸಂಬಂಧ

ಕುವೆಂಪು ಮತ್ತು ಮಾಸ್ತಿ ಕನ್ನಡ ಸಾಹಿತ್ಯ ಲೋಕದ ದ್ರಷ್ಟಾರರು. ಇಬ್ಬರೂ ನಮ್ಮ 'ಆಸ್ತಿ'ಗಳು. ಅವರ ಮಧ್ಯೆ ಅನೇಕ ಅಭಿಪ್ರಾಯ ಭೇದಗಳು ಇದ್ದವು. ಕುವೆಂಪುರವರದ್ದು ವೈಚಾರಿಕ ವೈಜ್ಞಾನಿಕ ತರ್ಕದ್ದು. ಮಾಸ್ತಿಯವರದ್ದಾದರೋ ಸನಾತನತೆಯನ್ನು ಬಿಟ್ಟುಕೊಡದ ಅರ್ವಾಚೀನ ಸಮನ್ವಯತೆಯದ್ದು. ಅವರಿಬ್ಬರೂ ತಮ್ಮ ತಮ್ಮ ನಂಬಿಕೆಗಳಿಗೆ ತಕ್ಕಂತೆಯೇ ಸಾಹಿತ್ಯ ಕೃತಿಗಳನ್ನು ಸೃಜಿಸಿದರು. ಕನ್ನಡದ ಕಣಜವನ್ನು ಸಿರಿಸಮೃದ್ಧಗೊಳಿಸಿದರು. ಅಷ್ಟೇ ಅಲ್ಲ, ತಮ್ಮ ಅಭಿಪ್ರಾಯಗಳನ್ನು ಅಷ್ಟೇ ಮುಕ್ತವಾಗಿ ನಿಷ್ಠುರವಾಗಿ ಪ್ರತಿಪಾದಿಸಿದರು ಕೂಡ. ಆದರೆ, ಅಂತಹ ಸನ್ನಿವೇಶಗಳು ಎಂದೂ ಅವರ ಪರಸ್ಪರ ಸ್ನೇಹ- ಗೌರವಗಳನ್ನು ಕಿಂಚಿತ್ತೂ ಚ್ಯುತಿಗೊಳಿಸಲಿಲ್ಲ. ಇಬ್ಬರೂ ಉದಾತ್ತರಾಗಿಯೇ ಕಂಗೊಳಿಸಿದರು. ಅವರಿಬ್ಬರ ನಡವಳಿಕೆ ಇಂದಿನ ನಮಗೆ ಆದರ್ಶ ಮತ್ತು ಮಾದರಿ.



ಅದು 1944ನೇ ಇಸವಿ. ನಲವತ್ತು ವರ್ಷದ ವಯಸ್ಕ ಕುವೆಂಪು ಅವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕ. ಅವರ 'ಶೂದ್ರ ತಪಸ್ವಿ' ನಾಟಕ ಆಗ ತಾನೇ ಬೆಳಕು ಕಂಡಿತ್ತು. ರಾಮಾಯಣದ ಅದರಲ್ಲಿಯೂ ಉತ್ತರ ಕಾಂಡದಲ್ಲಿ ಬರುವ ಘಟನೆಯನ್ನು ಆಧರಿಸಿದ್ದು. ಶಂಭೂಕನೆಂಬ ಶೂದ್ರನೊಬ್ಬ ತಪಸ್ಸು ಮಾಡಿದುದರಿಂದ ತನ್ನ